ಏಕೆಂದರೆ ನನಗೆ ಉತ್ತರ ಕೊಟ್ಟಾಗ ತಿದ್ದುಪಡಿಯಲ್ಲಿ ಆವಾಗಿನ ವ್ಯವಸ್ಥೆ ಏನಿತ್ತು? 01–04–2003 ರಲ್ಲಿ ಏನು ವ್ಯವಸ್ಥೆ ಮಾಡಿದ್ದೀರಿ ಅದನ್ನು ಹೆಳಿ? ಯಾವ ತಿದ್ದುಪಡಿ ತಂದಿದ್ದೀರಿ? What is the difference between our amendment and your decision of 1.4.2003? ಇದೇನು ನೀವು ನಮಗೆ ಮಕ್ಕಲ್ ಟೋಪಿ ಹಾಕುತ್ತಿದ್ದೀರಾ? ಹಳ್ಳಿಗಳಲ್ಲಿ ಹೇಳುತ್ತಾರೆ ಮಕ್ಕಲ್‌ಟೋಪಿ ಎಂದು. ಅಂದರೆ ಜನಗಳಿಗೆ ಮೋಸ ಮಾಡುವುದು ಎಂದರ್ಥ. ಇದು ನಕಲಿ. ನಕಲಿ ಆಗಿಬಿಟ್ಟಿದೆ ನಿಮ್ಮ ಸರ್ಕಾರ. ನಾವು ಮಾಡಿದ ಪ್ರತಿಗೆ ನೀವು ಸಹಿ ಮಾಡುವುದು. ಹೇಗಾಯಿತು ಇದು? ಬಹುಶಃ ನೀವು 2000ನೇ ಇಸವಿಗೂ ಹಿಂದೆಯೇ ಉಪ್ಪಾರಪೇಟೆಯಲ್ಲಿ ನೀವು ಅವನನ್ನು ಅರೆಸ್ಟ್ ಮಾಡಿಸಿ ಬಂದಾಗ ಆರ್.ಟಿ. ನಗರದಲ್ಲಿ ಫೇಕ್ ಸ್ಟ್ಯಾಂಪ್ ಪೇಪರ್ಸ್ ಮಾಡಿದಾಗ, ಆ ಎಂಬಾಸಿಂಗ್ ಮೆಶಿನ ಮಾಡಿದಾಗ ನಿಮ್ಮ ಕಣ್ಣಿಗೆ ಕಾಣಲಿಲ್ಲವೇ? ಬಿಳಿ ಹಳೆಯ ಮೇಲೆ ರಿಜಿಸ್ಟರ್ ಮಾಡಿಸುವ ವ್ಯವಸ್ಥೆ ಇದೆಯೆಂದು ಹೇಳಿ. Let us stop by indenting stamp paper from Nasik, Let us use only white papers. Why did you not adopt it in 1999? ಇವೊತ್ತು 1999ರಲ್ಲಿ ತಂದಂಥದ್ದನ್ನೇ ಇಟ್ಟು 2003 ರವರೆಗೂ ಎಲ್ಲವನ್ನೂ ಕೊಳ್ಳೆ ಹೊಡೆದುಕೊಂಡು ಹೋಗಲು ಬಿಟ್ಟು, ಎಂಬಾಸಿಂಗ್ ಮಾಡುವುದಕ್ಕೆ ಬಿಟ್ಟಿರಿ ನಕಲಿ ಛಾಪಾ ಕಾಗದಕ್ಕೆ ಮಂತ್ರಿಗಳು ಮೀಟ್ ಮಾಡಿದಿರಿ. ಇಲ್ಲಿ ಒಂದು ಕಡೆ ಹೇಳುತ್ತಾರೆ ನಾವು 01–04–2003ರಿಂದ ನಾವು ಸಂಪೂರ್ಣವಾಗಿ ಛಾಪಾ ಕಾಗದಗಳನ್ನು ನಿಲ್ಲಿಸಿಬಿಟ್ಟಿದ್ದೇವೆ ಎಂದು ಹೇಳುತ್ತಾರೆ.

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರೆ, ನಿಮಗೆ ಇನ್ನು ಇಷ್ಟು ಸಮಯ ಬೇಕು?

SRI. B. SOMASHEKHAR: I want to speak for some more time.ನಾನು ಬೇಕಾದರೆ ಊಟವಾದ ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು : ಏಕೆಂದರೆ ಹಲವಾರು ಸದಸ್ಯರುಗಳು ಊಟಕ್ಕೆ ಹೋಗಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಅಧ್ಯಕ್ಷರೆ, ನಾನು ಊಟವಾದ ಮೇಲೆ ಮಾತನ್ನು ಮುಂದುವರಿಸುತ್ತೇನೆ.

ಅಧ್ಯಕ್ಷರು : ಆಯಿತು. ಇನ್ನೊಂದು ವಿಷಯ. ಇವೊತ್ತು ಸಂಜೆ 6.30 ಕ್ಕೆ ಮಾನ್ಯ ರಾಜ್ಯಪಾಲರು ರಾಜಭವನದಲ್ಲಿ ಚಹಾ ಕೂಟವನ್ನು ಏರ್ಪಡಿಸಿದ್ದಾರೆ. ತಮಗೆಲ್ಲರಿಗೂ ಆಹ್ವಾನ ಪತ್ರಿಕೆಯನ್ನು ವೈಯಕ್ತಿಕವಾಗಿ ಕೊಟ್ಟಿದ್ದಾರೆ. ತಾವುಗಳೆಲ್ಲರೂ ತಪ್ಪದೇ ಬರಬೇಕು. ಈಗ ಪ್ರಕಟಣೆ.

3) ಪ್ರಕಟಣೆ

ವಿಧಾನ ಸಭೆಯ ಕಾರ್ಯಕಲಾಪಗಳ ಸಮಿತಿಯ ನಿರ್ಣಯದ ಪ್ರಕಟಣೆ

ಸಭಾಧ್ಯಕ್ಷರು : ದಿನಾಂಕ 6ನೇ ಜನವರಿ, 2004 ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ವಿದಾನಸಭೆಯ ಕಾರ್ಯಕಲಾಗಳನ್ನು ಈ ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 7ನೇ ಜನವರಿ, 2004 ರಿಂದ 14ನೇ ಜನವರಿ, 2004ರ ವರೆಗೆ ರಾಜ್ಯಾಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ ಹಾಗೂ ಸರ್ಕಾರಿ ಕಾರ್ಯಕಲಾಪಗಳು

2. ದಿನಾಂಕ 14ನೇ ಜನವರಿ, 2004 ರಂದು ಬೆಳಿಗ್ಗೆ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ
3. 8.01.2004 ರಿಂದ ಬೆಳಿಗ್ಗೆ 10.30 ರಿಂದ ಸಾಯಂಕಾಲ 6.00 ಗಂಟೆಯವರೆಗೆ ಕಾರ್ಯಕಲಾಪಗಳು ನಡೆಯಲಿವೆ.
4. ಪ್ರತಿದಿನ ವಿರಾಮದ ನಂತರ ಒಂದು (ಆಧ್ಯಾದೇಶಗಳಿಗೆ ಸಂಬಂಧಿಸಿದ ಅಥವಾ ಅತೀ ಜರೂರು ವಿಧೇಯಕ) ವಿಧೇಯಕವನ್ನು ಪರ್ಯಾಯಲೋಚನೆಗೆ ತೆಗೆದುಕೊಳ್ಳಲಾಗುವುದು.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ.

ಈಗ ಸದನ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳುವುದು (ಸಭೆಯು ಮಧ್ಯಾಹ್ನ 1 ಗಂಟೆ 47 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3.00 ಗಂಟೆಗೆ ಪುನಃ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಭೋಜನ ವಿರಾಮದ ನಂತರ ಸದನವು ಮಧ್ಯಾಹ್ನ 3.22 ಗಂಟೆಗೆ ಪುನಃ ಸಮಾವೇಶಗೊಂಡಿತು ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ಸಭೆಯ ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಹಲವಾರು ಸಂದರ್ಭಗಳಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ, ಇದಕ್ಕೆ ಕಡಿವಾಣ ಹಾಕಬೇಕು, ಸದನವನ್ನು ಏತಕ್ಕೆ ನಡೆಸಬೇಕು, ಆಡಳಿತ ಪಕ್ಷದ ಹಾಗೂ ವಿರೋಧಪಕ್ಷದ ಹಣೆಬರಹ ಅಷ್ಟೆ. ಇಲ್ಲಿ ಎಂಥಹ ಗಹನವಾದ ಚರ್ಚೆ ನಡೆಯುತ್ತಿದೆ, ಹಳ್ಳಿಯಲ್ಲಿ ಪಂಚಾಯಿತಿ ಅಥವಾ ಸೊಸೈಟಿಯಲ್ಲಿ ಸಭೆಯಲ್ಲಿ ಕೋರಂ ಇಲ್ಲದೆ ಇದ್ದರೆ ಸಭೆಯನ್ನು ಮುಂದಕ್ಕೆ ಹಾಕಿ ಎಂದು ಹೇಳುತ್ತೇವೆ. ಇಲ್ಲಿ ಕೋರಂಗೆ 25–26 ಸದಸ್ಯರಿಗಬೇಕೆಂದಿಗೆ ಅಷ್ಟು ಸದಸ್ಯರು ಇರುವುದಿಲ್ಲ. 20 ನಿಮಿಷದವರೆಗೆ ಬೆಲ್ ಬಾರಿಸಿದೆ. ಈ ಬಗ್ಗೆ ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಅಧಿವೇಶನವನ್ನು ಏತಕ್ಕೆ ನಡೆಸಬೇಕು? ಖರ್ಚಾದರೂ ಉಳಿಯುತ್ತದೆ, ಜನರ ಹಣವನ್ನು ಏತಕ್ಕೆ ವೇಸ್ಟ್ ಮಾಡಬೇಕು? ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ವಿಸರ್ಜಿಸುತ್ತೇವೆಂದು ಹೇಳುತ್ತಿದ್ದರು, ವಿಸರ್ಜಿಸಿ; ಇದನ್ನು ನೋಡಿದರೆ ಬೇಜಾರು ಅನಿಸುತ್ತದೆ 25 ನಿಮಿಷ ಬೆಲ್ ಹೊಡೆಯುತ್ತಿದೆ, ನಮ್ಮ ಕಡೆ ಕುರ್ಚಿಗಳು ಖಾಲಿ ಇವೆ. ನಿಮ್ಮ ಕಡೇನೂ ಕುರ್ಚಿಗಳು ಖಾಲಿ ಇದಾವೆ .

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ತಾವು ಗ್ಯಾರಂಟಿ ಕೊಟ್ಟರೆ ವಿಸರ್ಜನೆ ಮಾಡಬಹುದು (ನಗು)

ಶ್ರೀ ಎಸ್.ಎಸ್. ಪಾಟೀಲ್ : ನಾವು ನೀವು ಕೂಡೇ ಆರಿಸಿ ಬಂದರೆ ಅದನ್ನು ಹೇಳಬಹುದು, ಏನಾಗುತ್ತದೆ ಎಂಬುದು ಯಾರಿಗೆ ಗೊತ್ತಿದೆ.

ಅಧ್ಯಕ್ಷರು : ಸದಸ್ಯರುಗಳಿಗೆ ಜವಾಬ್ದಾರಿ ಇದೆ, ಅವರು ಅರಿತುಕೊಳ್ಳಬೇಕು, ನಾವು ಹೇಳುವ ಪರಿಸ್ಥಿತಿ ಇಲ್ಲ ಅವರಿಗೆ ಈ ವಿಷಯವೆಲ್ಲಾ ಗೊತ್ತಿದೆ.

ಶ್ರೀ ಎಸ್.ಎಸ್. ಪಾಟೀಲ್ : ತಾವು ಇದಕ್ಕೆ ಕಡಿವಾಣ ಹಾಕಬೇಕು, ಸದನದಲ್ಲಿ ತಮಗೆ ಅಧಿಕಾರವಿದೆ ಸದನದಲ್ಲಿ ಸದಸ್ಯರುಗಳೇ ಇಲ್ಲದಿದ್ದರೆ ಏನು ಮಾತನಾಡುವುದು? ಯಾರಿಗೆ ಮಾತನಾಡುವುದು?